# ನೈನಿತಾಲ್‌ನ ಗೋಲು ದೇವ



ನೈನಿತಾಲ್‌ನಿಂದ 23 ಕಿ.ಮೀ ದೂರದಲ್ಲಿನ ಘೋರಖಾನನಲ್ಲಿರುವ ಗೋಲು ದೇವ್ ಶಿವನ ಅವತಾರವೆಂದು ಉತ್ತರಾಂಚಲದ ಜನರ ನಂಬಿಕೆ. ಇಲ್ಲಿನ ಪೂಜಾ ವಿಧಿ ವಿಚಿತ್ರ. ಭಕ್ತರು ದೇವರಿಗೆ ತಮ್ಮ ಅಹವಾಲುಗಳನ್ನು ಸ್ಟಾಂಪ್ ಪೇಪರ್‌ನಲ್ಲಿ ಬರೆದು ತೀರ್ಪಿಗಾಗಿ ದಾವೆ ಹೂಡುತ್ತಾರೆ. ಅವರ ಆಸೆಯಿಂತೆ ತೀರ್ಪು ಹೊರಬಂದ ನಂತರ ದೇವರಿಗೆ ಕೃತಜ್ಞತೆ ಸಲ್ಲಿಸಲು ಕಂಚಿನ ಘಂಟೆಗಳನ್ನು ಮಂದಿರದಲ್ಲಿ ತೂಗು ಹಾಕುತ್ತಾರೆ. ಹೀಗೆ ತೂಗು ಹಾಕಿರುವ ಘಂಟೆಗಳು ದೇವಾಲಯದ ತುಂಬೆಲ್ಲಾ ರಾರಾಜಿಸುತ್ತಿದೆ. ಗೋಲು ದೇವ ಶೀಘ್ರವಾಗಿ ಹಾಗೂ ನ್ಯಾಯಯುತವಾಗಿಯೇ ತೀರ್ಪು ಕೊಡುವನೆಂಬುದು ಈ ಜನರ ನಂಬಿಗೆ

**–ಎಸ್.ಪ್ರಭಾವತಿ, ಬೆಂಗಳೂರು**





# ಕುಡುಪು

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಕೆಂಪು ಅಕ್ಕಿ ಅನ್ನ ಬೇಯಿಸಿ ಬಸಿಯಲು ಕುಡುಪು ಎಂಬ ವೃತ್ತಾಕಾರದ ತಟ್ಟೆಯನ್ನು ಬಳಸುತ್ತಾರೆ. ಹೆಚ್ಚಾಗಿ ಕೊರಗ ಸಮುದಾಯದ ಕುಶಲಕರ್ಮಿಗಳ ವೃತ್ತಿ ಇದು. ಇವರು ಕಾಡಿಗೆ ಹೋಗಿ ಕಪ್ಪಗಿನ ಬೀಳು ಬಳ್ಳಿಗಳನ್ನು ಆರಿಸಿ ತಂದು ಅದರ ಸಿಪ್ಪೆ ಕೆರೆದು ತೆಗೆದು ಕಲಾತ್ಮಕವಾಗಿ ಹೆಣೆಯುತ್ತಾರೆ. ಮನೆಮನೆಗೆ ಹೋಗಿ ಮಾರುವ ಒಂದು ಕುಡುಪು ತಟ್ಟೆಗೆ ಸಿಗುವುದು 20 ರೂಪಾಯಿ. ಅದು ಅವರ ಶ್ರಮಕ್ಕೆ ಸರಿಯಾದ ಬೆಲೆ ಅಲ್ಲದಿದ್ದರೂ ಬದುಕು ಸಾಗಿಸುವ ಕಾಯಕವನ್ನು ಇಷ್ಟ ಪಡುತ್ತಾರೆ. ಪ್ಲಾಸ್ಟಿಕ್, ಅಲ್ಯೂಮಿನಿಯಂ ಮತ್ತು ಸ್ಟೀಲ್ ಅಡುಗೆ ಉಪಕರಣಗಳ ಜಮಾನದಲ್ಲೂ ಕುಡುಪು ತಯಾರಿಸುವ ಉಡುಪಿಯ ಇಂದಿರಾ ಅಂಥವರ ಶ್ರದ್ಧೆ ಮೆಚ್ಚಬೇಕು.

**–ಜಗಜೀವನ್ ಶೆಟ್ಟಿ ಎಂ., ಉಡುಪಿ**

# ತಾಜಾ ತರಕಾರಿ ಪೆಟ್ಟಿಗೆ

ಮನೆಯಲ್ಲಿ ತರಕಾರಿಗಳನ್ನು ನಲವತ್ತು ಗಂಟೆಗಳ ಕಾಲ ಕೆಡದಂತೆ ಫ್ರಿಜ್ ಸಹಾಯವಿಲ್ಲದೇ ಇಡಬಹುದು! ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನೆ ಸಂಸ್ಥೆಯ ವಿಜ್ಞಾನಿ ಭುವನೇಶ್ವರಿ ಮತ್ತು ತಂಡದವರು ಇಂತಹ ಒಂದು ಉಪಯುಕ್ತ ಬಾಕ್ಸ್ ಅನ್ನು ಅವಿಷ್ಕಾರ ಮಾಡಿದ್ದಾರೆ. ಈ ಬಾಕ್ಸ್‌ನಲ್ಲಿ ತರಕಾರಿಯನ್ನು ಹಾಕಿ ಇಟ್ಟರೆ ತರಕಾರಿಯು ನಲವತ್ತು ಗಂಟೆಗಳ ಕಾಲ ಕೆಡುವುದಿಲ್ಲ. ಈ ಬಾಕ್ಸ್‌ಗೆ ವಿದ್ಯುತ್ ಬೇಕಿಲ್ಲ. ಯಾವುದೇ ರಾಸಾಯನಿಕವನ್ನು ಈ ಬಾಕ್ಸ್‌ನಲ್ಲಿ ಬಳಸಿಲ್ಲ. ವಾತಾವರಣದೊಂದಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಈ ಬಾಕ್ಸ್ ಅನ್ನು ವಿನ್ಯಾಸ ಮಾಡಲಾಗಿದೆ. ಆರೋಗ್ಯದ ದೃಷ್ಟಿಯಿಂದ ಈ ಬಾಕ್ಸ್ ಉಪಯುಕ್ತ. ಕೈಗೆ ಎಟುಕುವ ಬೆಲೆಯಲ್ಲಿ ಇದು ಲಭ್ಯ.

**–ಸಿ.ಎಸ್.ನಿರ್ವಾಣ ಸಿದ್ದಯ್ಯ, ಚಿಕ್ಕಬಾಣಾವರ**

